ಇ) ತಾಲ್ಲೂಕಿಗೆ ಕನಿಷ್ಟ ಈ ವರ್ಷ 2 ಕೇಂದ್ರಗಳಂತೆ ಕೊಡಲು ಸರ್ಕಾರ ಮುಂದಾಗುವುದೇ?

ಈ) ಹೊಸದಾಗಿ ತೆರೆಯಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಉ) ಸರ್ಕಾರದ ಬೊಕ್ಕಸ ಖಾಲಿಯಾಗಿರುವ ಕಾರಣ ತೆರೆಯಲು ಸಾಧ್ಯವಿಲ್ಲವೇ;

ಊ) ಗ್ರಾಮೀಣ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರಕ್ಕೆ ಸಾಧ್ಯವಿಲ್ಲವೇ; ಯಾವಾಗ ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯಲಾಗುವುದು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಪ್ರಸ್ತುತ ಸಾಲಿನಲ್ಲಿ 76 ಕೋರಿಕೆಗಳು ಬಂದಿವೆ.

ಆ) ಕೆಲವು ಪ್ರದೇಶಗಳಲ್ಲಿ ತೊಂದರೆ ಇರಬಹುದು. ಅದಾಗ್ಯೂ ಸಂಚಾರಿ ಸೇವೆಯನ್ನು ಒದಗಿಸಲಾಗಿದೆ.

ಇ) ಇಲ್ಲ ಸ್ವಾಮಿ

ಈ) ಹೊಸ ಪಶುವೈದ್ಯಕೀಯ ಸಂಸ್ಥೆ ಮಂಜೂರು ಮಾಡುವ ಕಾರ್ಯಕ್ರಮ ಇಲ್ಲ.

ಉ) ಉದ್ಭವಿಸುವುದಿಲ್ಲ

ಊ) ಪ್ರಸ್ತುತ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಮಾತ್ರ ಇದೆ.

ಭಟ್ಕಳ ತಾಲ್ಲೂಕಿನಲ್ಲಿ ಮೀನುಗಾರಿಕಾ ಬಂದರುಗಳ ಟ್ರಂಚಿಂಗ್ ಹಾಗೂ ಬ್ಯಾಕ್‌ವಾಟರ್ ಬಗ್ಗೆ

3111 (3465) : ಶ್ರೀ ನಾಯಕ್ ಜೆ.ಡಿ (ಭಟ್ಕಳ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೀನುಗಾರಿಕಾ ಬಂದರುಗಳಾದ ಭಟ್ಕಳ, ತೆಂಗಿನ ಗುಂಡಿ ಹಾಗೂ ಹೊನ್ನಾವರ ತಾಲ್ಲೂಕಿನ ಕಾಸರಗೋಡಗಳನ್ನು ಟ್ರಂಚಿಂಗ್ ಹಾಗೂ ಬ್ಯಾಕ್ ವಾಟರ್ ಬಗ್ಗೆ ಕೈಗೆ ಎತ್ತಿಕೊಳ್ಳಬೇಕಾದ ಕಾಮಗಾರಿ ಯಾವ ಹಂತದಲ್ಲಿ ಇದೆ;

ಆ) ಪ್ರತಿ ವರ್ಷ ಸದರಿ ಮೀನುಗಾರಿಕಾ ಬಂದರುಗಳಲ್ಲಿ ಹೂಳು ತುಂಬಿರುವುದರಿಂದ ಅನೇಕ ಸಾವುನೋವುಗಳು ಹಾಗೂ ಮೀನುಗಾರಿಕಾ ದೋಣಿಗಳಿಗೆ ಭರಿಸಲಾರದಷ್ಟು ನಷ್ಟ ಆಗುವುದು ಸರಕಾರದ ಗಮನಕ್ಕೆ ಬಂದಿದೆಯೆ;

ಇ) ಸದರಿ ಬಂದರುಗಳ ತ್ವರಿತ ದುರಸ್ತಿಗೆ ಸರಕಾರದ ನಿಲುವೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು):

ಅ) **ಭಟ್ಕಳ:**

ಭಟ್ಕಳ ಬಂದರಿನಲ್ಲಿ ಪದೇ ಪದೇ ಹೂಳು ತುಂಬುವ ಪರಿಸ್ಥಿತಿ ಇದ್ದು, ಈ ತೊಂದರೆಯನ್ನು ಶಾಶ್ವತವಾಗಿ ಬಗೆಹರಿಸುವ ನಿಟ್ಟಿನಲ್ಲಿ ವೈಜ್ಞಾನಿಕ ಪರಿಹಾರೋಪಾಯದ ಅವಶ್ಯಕತೆಯಿದೆ. ಈ ಸಂಬಂಧ ಅಧ್ಯಯನ, ಪರಿಶೀಲನೆ ಹಾಗೂ ತಜ್ಞರ ಅಭಿಪ್ರಾಯ ಪಡೆಯುವ ಸಲುವಾಗಿ ಬಂದರು ಇಲಾಖೆಯವರು ಸೆಂಟ್ರಲ್ ವಾಟರ್ ಮತ್ತು ಪವರ್ ರೀಸರ್ಚ್ ಸ್ಟೇಷನ್, ಮಣಿ, ಇವರೊಂದಿಗೆ ವ್ಯವಹರಿಸುತ್ತಲಿದ್ದು, ತಾಂತ್ರಿಕ ಅಭಿಪ್ರಾಯವನ್ನು ನೀಡಲು ಅವರನ್ನು ಕೋರಲಾಗಿರುತ್ತದೆ.

ತೆಂಗಿನಗುಂಡಿ:

ಅಳಿವೆಕೋಡಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಮೀನುಗಾರಿಕೆ ಇಳದಾಣ ಕೇಂದ್ರ ನಿರ್ಮಾಣವನ್ನು ರೂ. 89.53 ಲಕ್ಷದಲ್ಲಿ ನಿರ್ಮಿಸಲು ಮಂಜೂರಾತಿಯಾಗಿದ್ದು, ರೂ. 202.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ 18.3.2001ರಲ್ಲಿ ಅನುಮೋದನೆಗೆ ಕಳುಹಿಸಲಾಗಿದೆ. ಭಾರತ ಸರ್ಕಾರದಿಂದ ಅನುಮೋದನೆ ಸ್ವೀಕೃತವಾಗಿರುವುದಿಲ್ಲ. ತದನಂತರ 2002–2003ನೇ ಸಾಲಿನ ಎಸ್.ಆರ್. ದರದ ಪ್ರಕಾರ ರೂ. 225.00 ಲಕ್ಷಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ದಿನಾಂಕ 17.6.2003ರಲ್ಲಿ ಭಾರತ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿರುತ್ತದೆ. ಈ ಅಂದಾಜು ಪಟ್ಟಿಗಳಲ್ಲಿ ಅಳಿವೆಕೋಡಿ ಅಭಿವೃದ್ಧಿ ಕಾಮಗಾರಿಗಳು ಒಳಗೊಂಡಿದ್ದು, ಭಾರತ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಇದು ಪೂರ್ಣಗೊಂಡ ನಂತರ ತೆಂಗಿನ ಗುಂಡಿಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು.

ಹೊನ್ನಾವರ:

ಹೊನ್ನಾವರ 2ನೇ ಹಂತದ ಮೀನುಗಾರಿಕೆ ಬಂದರು ನಿರ್ಮಿಸುವ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಭಾರತ ಸರ್ಕಾರವು ಕೇಂದ್ರದ ಮೀನುಗಾರಿಕೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೇಂದ್ರೀಯ ಅಧ್ಯಯನ ತಂಡವನ್ನು ರಚಿಸಿದ್ದು, ಸದರಿ ತಂಡವು ದಿನಾಂಕ: 10.6.2003ರಂದು ಸ್ಥಳಕ್ಕೆ ಭೇಟಿ ನೀಡಿರುತ್ತದೆ. ಈ ತಂಡವು ಅಧ್ಯಯನ ವರದಿಯನ್ನು ಸಲ್ಲಿಸಬೇಕಾಗಿದ್ದು, ಭಾರತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಪ್ರಸ್ತಾವನೆಯಲ್ಲಿ ಹೂಳೆತ್ತುವಿಕೆ ಹಾಗೂ ಬ್ರೇಕ್‌ವಾಟರ್ ನಿರ್ಮಾಣ ಅಂಶಗಳು ಒಳಗೊಂಡಿರುತ್ತವೆ.

ಆ) ಬಂದಿದೆ.

ಇ) ಈಗಾಗಲೇ ಸಲ್ಲಿಸಲಾಗಿರುವ ಯೋಜನೆಗಳಿಗೆ ತ್ವರಿತವಾಗಿ ಮಂಜೂರಾತಿ ನೀಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ. ಅನುಮೋದನೆ ದೊರಕಿದ ತಕ್ಷಣ ಕಾಮಗಾರಿ ಪ್ರಾರಂಭಿಸಲಾಗುವುದು.

ರಾಜ್ಯದ ಹಲವು ಜಾತಿ ಕೋಮಿನವರನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆ ಮಾಡುವುದು

3112 (3864) : ಶ್ರೀ ನಾರಾಯಣ ಸ್ವಾಮಿ ಎ (ಆನೇಕಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಹಲವು ಜಾತಿ, ಕೋಮಿನವರು ಪರಿಶಿಷ್ಟ ಜಾತಿ / ವರ್ಗಕ್ಕೆ ಸೇರಿಸಿ ಕೊಳ್ಳಲು ರಾಜ್ಯ ಸರ್ಕಾರಕ್ಕೆ ಮನವಿಗಳು ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ ಸದರಿ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿಸಿಕೊಳ್ಳುವ ಪರಿಷ್ಕೃತ ಮಾರ್ಪಾಡುಗಳೇನಾದರೂ ಇದ್ದರೆ ವಿವರ ನೀಡುವುದು?

ಇ) ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಎ.ಬಿ.ಸಿ.ಡಿ ವರ್ಗೀಕರಣಕ್ಕೆ ಮಾರ್ಪಾಡು ಮಾಡಲು ಸರ್ಕಾರಕ್ಕೆ ಮನವಿಗಳು ಬಂದಿದೆಯೆ?

ಈ) ಬಂದಿದ್ದರೆ, ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಆ) ಕಾಲಕಾಲಕ್ಕೆ ಇಂತಹ ಬೇಡಿಕೆಗಳನ್ನು ಸರ್ಕಾರವು ಸ್ವೀಕರಿಸುತ್ತಿದೆ. ಇಂತಹ ಬೇಡಿಕೆಗಳನ್ನು ಸರ್ಕಾರವು ವಿಧಿವಿಧಾನಗಳಿಂದ ಪರಿಶೀಲಿಸುತ್ತಿದೆ.